1	2	3
3	ಚಿತ್ರದುರ್ಗ	166
4	ದಾವಣಗೆರೆ	91
5	ಕೋಲಾರ	306
6	ಶಿವಮೊಗ್ಗ	325
7	ತುಮಕೂರು	374
8	ಮೈಸೂರು	98
9	ಚಾಮರಾಜನಗರ	64
10	ಮಂಡ್ಯ	50
11	ಹಾಸನ	175
12	ಚಿಕ್ಕಮಗಳೂರು	118
13	ದಕ್ಷಿಣ ಕನ್ನಡ	2
14	ಉಡುಪಿ	4
15	ಕೊಡಗು	32
16	ಬೆಳಗಾಂವ	216
17	ಬಿಜಾಪುರ	101
18	ಬಾಗಲಕೋಟೆ	39
19	ಧಾರವಾಡ	107
20	ಗದಗ್	22
21	ಹಾವೇರಿ	260
22	ಉತ್ತರಕನ್ನಡ	86
23	ಗುಲ್ಬರ್ಗಾ	140
24	ಬೀದರ್	83
25	ಬಳ್ಳಾರಿ	63
26	ರಾಯಚೂರು	54
27	ಕೊಪ್ಪಳ	44
	ಒಟ್ಟು	**3298**

ರಾಜ್ಯದಲ್ಲಿ ಅಬಕಾರಿ ಹರಾಜಿನಿಂದ ಬರುವ ಹಣ

2607(3141) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಸಾರಾಯಿ ಹರಾಜಿನಿಂದ ಬಂದಿರುವ ಹಣ ಎಷ್ಟು;

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತಾಲ್ಲೂಕುವಾರು ಸಾರಾಯಿ ಹರಾಜಿನಿಂದ ಬಂದಿರುವ ಹಣ ಎಷ್ಟು?

ಇ) ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಈ) ಕಳೆದ 3 ವರ್ಷಗಳಿಂದ ಅಕ್ರಮವಾಗಿ ಮಾರಾಟ ಮಾಡುವ ಎಷ್ಟು ಜನರನ್ನು ಬಂಧಿಸಲಾಗಿದೆ; ಇವರಿಗೆ ಯಾವ ಶಿಕ್ಷೆ ವಿಧಿಸಲಾಗಿದೆ; ಎಷ್ಟು ದಂಡ ವಸೂಲಿ ಮಾಡಲಾಗಿದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ)

(ರೂ. ಕೋಟಿಗಳಲ್ಲಿ)

2000-01		2001-02		2002-03	
ಕಿಸ್ತು	ಸಾರಾಯಿ ಸುಂಕ	ಕಿಸ್ತು	ಸಾರಾಯಿ ಸುಂಕ	ಕಿಸ್ತು	ಸಾರಾಯಿ ಸುಂಕ
816.60	171.23	849.73	176.14	933.67	174.64

ಆ) ವರ್ಷವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು. ಅಕ್ರಮ ಸಾರಾಯಿ ಮಾರಾಟವನ್ನು ತಡೆಗಟ್ಟಲು ಅಬಕಾರಿ ಇಲಾಖೆಯ ಜಾರಿ ಮತ್ತು ತನಿಖಾ ದಳವು ಅಬಕಾರಿ ದಾಳಿ, ರಸ್ತೆ ಗಸ್ತು ಮತ್ತು ವ್ಯಾಪಕ ತನಿಖೆಯನ್ನು ನಡೆಸುತ್ತಿದೆ.

ಈ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಇಂತಹ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದ 79 ಜನರನ್ನು ಬಂಧಿಸಿ 16,123 ಲೀಟರ್‌ನಷ್ಟು ಸಾರಾಯಿಯನ್ನು ವಶಪಡಿಸಿಕೊಂಡಿದ್ದು ಕೆಲವು ಪ್ರಕರಣಗಳು ತನಿಖೆ ಹಂತದಲ್ಲಿರುತ್ತವೆ. ಹಾಗೂ ಕೆಲವರಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಇತ್ಯರ್ಥಪಡಿಸಿದ ಕೆಲವು ಪ್ರಕರಣಗಳಲ್ಲಿ ರೂ. 35,000 ಗಳಷ್ಟು ದಂಡ ವಸೂಲಾಗಿದೆ.

ಆರಕ್ಷಕ ಠಾಣೆಗಳಲ್ಲಿ ದೂರು ದಾಖಲಾಗದ ಮನವಿ ಸ್ವೀಕಾರಕ್ಕೆ ವಿಶೇಷ ಘಟಕ ಸ್ಥಾಪನೆ

2608(2869) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆರಕ್ಷಕ ಠಾಣೆಗಳಲ್ಲಿ ದೂರು ಸ್ವೀಕಾರ ಮಾಡಲು ನಿರಾಕರಿಸಿರುವ ಪ್ರಕರಣ ಜರುಗಿದೆಯೆ, ಹಾಗಿದ್ದಲ್ಲಿ, ಎಲ್ಲೆಲ್ಲಿ ನಡೆದಿದೆ;

ಆ) ಈ ದೂರುಗಳನ್ನು ದಾಖಲಾತಿ ಮಾಡಿಕೊಳ್ಳಲಾಗದ ಸಂದರ್ಭಗಳಲ್ಲಿ ದೂರುಗಳನ್ನು ಕೊಡುವುದಾದರೂ ಎಲ್ಲಿಗೆ;

ಇ) ಇದಕ್ಕಾಗಿಯೇ ಪ್ರತ್ಯೇಕ (ಮನವಿ ಸ್ವೀಕಾರಕ್ಕೆ) ವಿಶೇಷ ಘಟಕ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ;

ಈ) ಇಂತಹ ಘಟಕಗಳನ್ನು ಈಗಾಗಲೇ ಪ್ರಾಯೋಗಿಕವಾಗಿ ರಚಿಸಲಾಗಿದೆಯೇ; ಹಾಗಿದ್ದರೆ, ಎಲ್ಲಿ ರಚಿಸಲಾಗಿದೆ;

ಉ) ಇದನ್ನು ನಿರ್ವಹಿಸುವ ಸಿಬ್ಬಂದಿಗಳು ಯಾರು?